ಬಿಟ್ಟು ರಂಗಭೂಮಿಯಲ್ಲಿಯೇ ಮುಂದುವರಿದೆ. ಬಹುಶಃ ನಾನು 'ರಾಮಾ ರಾಮಾ ರೇ'ಚಿತ್ರದಲ್ಲಿ ನಟಿಸದಿದ್ದರೆ ಚಿತ್ರರಂಗಕ್ಕೆ ಬರುತ್ತಲೇ ಇರಲಿಲ್ಲವೇನೋ' ಎಂದು ತುಸು ಬೇಜಾರಿನಿಂದಲೇ ಹೇಳಿಕೊಳ್ಳುತ್ತಾರೆ ಬಿಂಬಶ್ರೀ.

ಕಿರುತೆರೆಯಲ್ಲಿಯೂ ನಟಿಸಿರುವ ಬಿಂಬಶ್ರೀ, ಅಲ್ಲಿ ಆದ ಕಹಿ ಅನುಭವದ ಕಾರಣದಿಂದ ಅದನ್ನು ನೆನಪಿಸಿಕೊಳ್ಳಲು ಇಷ್ಟಪಡುವುದಿಲ್ಲ. 'ಕಿರುತೆರೆಯಲ್ಲಿ ನನಗೆ ಸಾಕಷ್ಟು ಕಹಿ ಅನುಭವ ಆಗಿದೆ. ಸಿನಿಮಾರಂಗದಲ್ಲಿಯೂ ಆಗಿದೆ. ಆದರೆ ಈಗ ಅದನ್ನೆಲ್ಲ ನುಂಗಿಕೊಂಡು ಇರಲು ಕಲಿತಿದ್ದೇನೆ. ಅದೃಷ್ಟವಿದ್ದರೆ ಅವಕಾಶ ಸಿಗುತ್ತದೆ. ಚಿತ್ರರಂಗದಲ್ಲಿ ಇನ್ನೂ ನನ್ನಂಥ ನಟಿಗಾಗಿ ಪಾತ್ರಗಳನ್ನು ರೂಪಿಸುವ ನಿರ್ದೇಶಕರು ಇದ್ದೇ ಇದ್ದಾರೆ. ಆದರೆ ಅವರಿಗೆ ನಾನು, ನನಗೆ ಅವರು ಸಿಗುತ್ತಿಲ್ಲ. ನಮ್ಮಿಬ್ಬರ ರಸ್ತೆಗಳು ಬೇರೆ ಬೇರೆಯಾಗಿವೆ. ಅವುಗಳು ಒಂದಾಗುವವರೆಗೂ ಕಾಯಬೇಕಷ್ಟೆ. ನಿರ್ದೇಶಕರು ನಿರ್ಮಾಪಕರ ಮನೆಗಳಿಗೆ ಹೋಗಿ ಅಂಗಲಾಚುವುದೆಲ್ಲ ನನ್ನ ಸ್ವಭಾವ ಅಲ್ಲ. ಅವಕಾಶಗಳನ್ನು ಗಿಟ್ಟಿಸಿಕೊಳ್ಳಲು ಹಾಗೆಲ್ಲ ಮಾಡಬೇಕು ಎಂದು ಹಲವರು ಹೇಳುತ್ತಾರೆ. ಅವರ ಪ್ರಕಾರ ಅದು ಸರಿಯೇ ಇರಬಹುದು. ಆದರೆ ನನ್ನಿಂದ ಅದು ಸಾಧ್ಯವಿಲ್ಲ. ಹೀಗೆ ಹೇಳಿದರೆ ಕೆಲವರು ಅಹಂಕಾರ ಅಂದುಕೊಳ್ಳುತ್ತಾರೆ. ಇದು ಅಹಂಕಾರ ಅಲ್ಲ; ಆತ್ಮಗೌರವ' ಎಂದು ಸ್ಪಷ್ಟವಾಗಿಯೇ ಹೇಳುವ ಬಿಂಬಶ್ರೀ ಸದ್ಯದಲ್ಲಿಯೇ ತಮಿಳು ಚಿತ್ರರಂಗಕ್ಕೆ ಹೋಗುವ ಸಿದ್ಧತೆಯಲ್ಲಿದ್ದಾರೆ.

'ತಮಿಳಿನ ಮಹಿಳಾಪ್ರಧಾನ ಸಿನಿಮಾವೊಂದರಲ್ಲಿ ನಟಿಸುವ ಅವಕಾಶ ಬಂದಿದೆ. ಒಂದು ಫೋಟೊ ಶೂಟ್ ಮಾಡಿ ಕಳಿಸಿಕೊಡುವಂತೆ ಕೇಳಿದ್ದಾರೆ. ಫೋಟೊಶೂಟ್‌ಗೆ ಸಿದ್ಧತೆ ನಡೆಸಿರುವಾಗಲೇ ಕೊರೊನಾ ವೈರಸ್ ದಾಳಿಯಿಂದ ದೇಶವೇ ಲಾಕ್ ಡೌನ್ ಆಗಿದೆ. ಹಾಗಾಗಿ ಇನ್ನೊಂದೆರಡು ತಿಂಗಳು ತಡವಾಗಬಹುದು' ಎಂದು ಅವರು ವಿವರಿಸುತ್ತಾರೆ.

ನಟನೆ ಎನ್ನುವುದು ಯಾವಾಗಲೂ ಮೊನಚುಗೊಳಿಸುತ್ತಲೇ ಇರಬೇಕಾದ ಕಲೆ ಎನ್ನುವುದು ಅವರ ಅಭಿಪ್ರಾಯ. ಹಾಗಾಗಿಯೇ ಅವರು ತನ್ನನ್ನು ರೂಪಿಸಿದ ರಂಗಭೂಮಿಯ ನಂಟನ್ನು ಬಿಟ್ಟಿಲ್ಲ.

'ಮೊದಲು ನನಗೆ ಸಂಗೀತದಲ್ಲಿ ಸಾಕಷ್ಟು ಆಸಕ್ತಿ ಇತ್ತು. ಆದರೆ ತಾಲೀಮು ಇಲ್ಲದೆ ಈಗ ಅದರ ಮೇಲೆ ಹಿಡಿತ ತಪ್ಪಿಹೋಗಿದೆ. ನಟನೆಯೂ ಹಾಗೆಯೇ. ನಿರಂತರವಾಗಿ ಅದರ ಒಡನಾಟದಲ್ಲಿ ಇಲ್ಲದಿದ್ದರೆ ಸಭಾಕಂಪನ ಶುರುವಾಗಿಬಿಡುತ್ತದೆ. ಹಾಗಾಗಿ ಈಗಲೂ ನಾನು ನಾಲ್ಕೈದು ತಿಂಗಳಿಗೊಂದಾದರೂ ನಾಟಕದಲ್ಲಿ ನಟಿಸುತ್ತೇನೆ. ಅದು ಸಿನಿಮಾ ನಟನೆಗೂ ಸಾಕಷ್ಟು ಸಹಾಯ ಮಾಡುತ್ತದೆ' ಎನ್ನುವ ಬಿಂಬಶ್ರೀ ಇವತ್ತಲ್ಲಾ ನಾಳೆ ತನ್ನ ಪ್ರತಿಭೆಗೆ ಕನ್ನಡದ ನೆಲದಲ್ಲಿಯೇ ಸೂಕ್ತವಾದ ಅವಕಾಶ ಸಿಗುತ್ತದೆ ಎಂಬ ಗಟ್ಟಿಯಾದ ನಂಬಿಕೆಯ ನಂದಾದೀಪವನ್ನು ಹಚ್ಚಿಕೊಂಡು ಕನಸು ಕಂಗಳಿಂದ ಕಾಯುತ್ತಿದ್ದಾರೆ. ■

# ಲೇಖಕಿ ಹರಿಪ್ರಿಯಾ

ಹರಿಪ್ರಿಯಾ ಪೆನ್ನು ಹಿಡಿದಿದ್ದಾರೆ! ಹಾ, ಇದು ಸಿನಿಮಾದಲ್ಲಿಯಲ್ಲ. ನಿಜಜೀವನದಲ್ಲಿ ಬ್ರೇಕ್‌ಡೌನ್‌ನಿಂದ ಎಲ್ಲರೂ ಮನೆಯಲ್ಲಿಯೇ ಕುಳಿತುಕೊಳ್ಳುವ ಪರಿಸ್ಥಿತಿ ಇದೆ. ಗೃಹಬಂಧನದ ಈ ಅವಧಿ ಹಲವರಿಗೆ ತಮ್ಮ ಹಿಂದಿನ ಹವ್ಯಾಸಗಳ ನವೀಕರಣಕ್ಕೂ ಅವಕಾಶ ಕೊಡುತ್ತಿದೆ. ಆದರೆ ಹರಿಪ್ರಿಯಾ ಬರವಣಿಗೆಗೆ ತೊಡಗಿಕೊಳ್ಳಲು ಕಾರಣವಾಗಿರುವುದು ಲಾಕ್‌ಡೌನ್ ಅಷ್ಟೇ ಅಲ್ಲ.

**babeknows.com** — ಇದು ಹರಿಪ್ರಿಯಾ ತನ್ನ ಬರವಣಿಗೆಯನ್ನು ಹಂಚಿಕೊಳ್ಳುತ್ತಿರುವ ತಾಣದ ಹೆಸರು. ಇಲ್ಲಿಯೇ ಅವರು ತಾನು ಯಾಕೆ ಮತ್ತು ಹೇಗೆ ಬರವಣಿಗೆಯ ಜಾಡಿಗೆ ಬಿದ್ದಿದ್ದೇನೆ ಎಂಬುದನ್ನೂ ಹಂಚಿಕೊಂಡಿದ್ದಾರೆ. ಅಸಂಖ್ಯ ಅಭಿಮಾನಿಗಳ ಹೃದಯ ಕದ್ದಿರುವ ಹರಿಪ್ರಿಯಾ ಬರವಣಿಗೆಯನ್ನು ನೆಚ್ಚಿಕೊಳ್ಳಲು ಕಾರಣ ಲವ್ ಬ್ರೇಕ್‌ಅಪ್ ಎಂದರೆ ನಂಬುತ್ತೀರಾ? ಈ ವಿಷಯವನ್ನು ಅವರೇ ಹೇಳಿಕೊಂಡಿದ್ದಾರೆ.

'ಈಗ ಸರಿಯಾಗಿ ಐದು ವರ್ಷ ಐದು ತಿಂಗಳ ಹಿಂದಿನವರೆಗೆ ನಾನು ಯಾವತ್ತಾದರೂ ಏನಾದರೂ ಬರೆಯಬಲ್ಲೆ ಎಂದು ಕನಸಲ್ಲಿಯೂ ಅಂದುಕೊಂಡಿರಲಿಲ್ಲ. ನನ್ನ ತಂದೆಯ ಸಾವಿನ ನಂತರ ನನ್ನನ್ನು ಅತಿ ಹೆಚ್ಚು ಕಂಗೆಡಿಸಿದ್ದು ನನ್ನ ಬ್ರೇಕಪ್. ಈ ಹೊಡೆತ ನಾನು ಊಹಿಸಿದ್ದಕ್ಕಿಂತಲೂ ಹೆಚ್ಚು ಜೋರಾಗಿತ್ತು. ಆದರೆ ಡಿಪ್ರೆಶನ್‌ಗೆ ಹೋಗುವಂಥ ಹುಡುಗಿ ನಾನಾಗಿರಲಿಲ್ಲ. ಸಾಕಷ್ಟು ಅತ್ತೆ, ನನ್ನ ಮನಸ್ಸನ್ನು ಬೇರೆ ಕೆಲಸಗಳಲ್ಲಿ ತೊಡಗಿಕೊಳ್ಳಲು ಯತ್ನಿಸಿದೆ. ತುಂಬ ದುಃಖ ಅನುಭವಿಸುತ್ತಿರುವಾಗಲೂ ನನ್ನ ನೋವನ್ನು ಜನರೆದುರು ಹೇಳಿಕೊಳ್ಳಲು ಹಿಂಜರಿಯುತ್ತಿದ್ದೆ. ಯಾಕೆಂದರೆ ನಾನು ಸೆಲೆಬ್ರಿಟಿ. ಇದೇ ಒಂದು ದೊಡ್ಡ 'ಸುದ್ದಿ'ಯಾಗುವುದು ನನಗೆ ಬೇಕಿರಲಿಲ್ಲ. ಅಷ್ಟೇ ಅಲ್ಲ, ಜನರು ಇದರ ಅಡ್ವಾಂಟೇಜ್ ತೆಗೆದುಕೊಳ್ಳಬಹುದು ಎಂಬ ಆತಂಕವೂ ನನಗಿತ್ತು. ಅಂಥ ಸಂದರ್ಭದಲ್ಲಿ ಅಮ್ಮನನ್ನ ಬಿಟ್ಟರೆ ನನಗೆ ಅತ್ಯಂತ ಆಪ್ತಸ್ನೇಹಿತರಾಗಿ ಕಂಡಿದ್ದು ಪೆನ್ನು ಮತ್ತು ಹಾಳೆ. ಯಾವಾಗ ಮನಸ್ಸು ಖಿನ್ನವಾಗುತ್ತಿತ್ತೋ ಆಗೆಲ್ಲ ನಾನು ಖಾಲಿ ಹಾಳೆಯನ್ನು ತೆಗೆದುಕೊಂಡು ಮನಸ್ಸಿಗೆ ತೋಚಿದ್ದನ್ನು ಬರೆಯಲು ಶುರುಮಾಡುತ್ತಿದ್ದೆ. ಇದು ಮನಸ್ಸಿಗೆ ಸಮಾಧಾನ ನೀಡುತ್ತಿತ್ತು. ಬರವಣಿಗೆಯಲ್ಲಿ ಮಾತ್ರ ನನಗೆ ಮನಸ್ಸನ್ನು ಕೇಂದ್ರೀಕರಿಸಲು ಸಾಧ್ಯವಾಗುತ್ತಿತ್ತು. ಹೀಗೆ ಬರವಣಿಗೆಯ ಜಾಡಿಗೆ ಬಿದ್ದೆ. ಅದೇ ಮುಂದುವರಿದು ಇಲ್ಲಿಗೆ ಬಂದು ನಿಂತಿದೆ' ಎಂದು ಹರಿಪ್ರಿಯಾ ಬರೆದುಕೊಂಡಿದ್ದಾರೆ.

ಇದೇ ಬರಹದಲ್ಲಿ ಅವರು 'ನೀವು ನನ್ನ ಕಥೆ ಕೇಳಿ ಅನುಕಂಪ ತೋರಿಸುವುದು ಬೇಕಾಗಿಲ್ಲ' ಎಂದೂ ಬರೆದುಕೊಂಡಿದ್ದಾರೆ. 'ನಾನು ಗಟ್ಟಿಯಾಗಿದ್ದೇನೆ. ಯಾವ ಸಂಗತಿಯೂ ನನ್ನನ್ನು ಛಿದ್ರಗೊಳಿಸಲು ಸಾಧ್ಯವಿಲ್ಲ. ಚಿತ್ರರಂಗದಲ್ಲಿ ನಾನು ಬೆಳೆದಿರುವ ರೀತಿಯೇ ಇದನ್ನು ಹೇಳುತ್ತಿದೆ' ಎಂದೂ ಅವರು ಬರೆದುಕೊಂಡಿದ್ದಾರೆ.

ಈ ಬ್ಲಾಗ್‌ನಲ್ಲಿ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಈಗಾಗಲೇ ಹರಿಪ್ರಿಯಾ ಕೆಲವು ಬರಹಗಳನ್ನು ಪ್ರಕಟಿಸಿದ್ದಾರೆ. ಅವುಗಳಿಗೆ ಓದುಗರಿಂದ ಒಂದಿಷ್ಟು ಪ್ರತಿಕ್ರಿಯೆಯೂ ಬಂದಿದೆ.



ಚಿತ್ರ: ಕೃಷ್ಣಕುಮಾರ್ ಪಿ.ಎಸ್.